ಸತ್ಯಾಗ್ರಹ

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 30 ಸಂಚಿಕೆ 163] ಸೋಮವಾರ 24—2—47 [ಬಿಡಿ ಪ್ರತಿ 6 ಪೈ

ಸೈನಿಕರು 3 ದಿನಗಳಿಂದ ದಂಗೆ ಹೂಡಿದ್ದಾರೆ.

ಕುದುರೆ ಜೂಜು

ಬೊಂಬಾಯಿ ಫೆ 22 — 11 ಟ್ರಬಲ್ ಟೋಟು ಟಿಕೀಟುಗಳಿಗೆ ತಲಾ ರೂ 7234 ದೊರೆತಿದೆ.

———

ಸಂಸ್ಥಾನದಲ್ಲಿ ಬರಲಿರುವ ಸುಧಾರಣೆಗಳು ಮತ್ತು ಸನಾತನಿಗಳ ಕರ್ತವ್ಯ

ಭಾರತದ ಭಾವೀ ರಾಜ್ಯಾಂಗ ರಚನೆಗಾಗಿ ದೆಹಲಿಯಲ್ಲಿ ಘಟನಾ ಸಮಿತಿಯು ಕೈಗೊಂಡಿರುವ ಕಾರ್ಯವನ್ನು ಅವಲೋಕಿಸಿ ಆಳುವ ಮಹಾ ಪ್ರಭುಗಳವರು ಮೈಸೂರು ದೇಶದಲ್ಲಿ ಮಾಡಲಿರುವ ಕೆಲ ಸುಧಾರಣೆಗಳಿಗೆ ಪ್ರಜೆಗಳ ಅಭಿಪ್ರಾಯಗಳನ್ನು ತಿಳಿದು ಸಮಯೋಚಿತ ಸಲಹೆಯನ್ನು ಕೊಡಬೇಕೆಂದು ಮಾನ್ಯ ದಿವಾನರವರಿಗೆ ಅಧಿಕಾರ ಕೊಟ್ಟಿರುವುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಈ ಸಂದರ್ಭದಲ್ಲಿ ಸಂಸ್ಥಾನದ ಧರ್ಮ ಸಂಸ್ಥೆಗಳು ಸನಾತನಿಗಳು ವಿವಿಧ ಸಂಘಗಳು ಮಾಡಬೇಕಾದ ಕಾರ್ಯ ಗುರುತರವಾಗಿದೆ.

ಭಾರತದ ವಿವಿಧ ಭಾಗಗಳಲ್ಲಿ ಧರ್ಮ ವೈರಿಕ ವಿಧವಾದ ಅಪಘಾತಗಳುಂ ರೂ ನಮ್ಮ ಮಹಾಸ್ವಾಮಿಯ ಧರ್ಮ ಶ್ರದ್ಧೆಯಿಂದ ಸಂ ದಲ್ಲಿ ಧರ್ಮಕ್ಕೆ ಯಾವ ಅಪಾ ಆಗಿಲ್ಲ. ಮುಂಬರುವ ಸುಧಾ ಲ್ಲಿಯೂ ಧರ್ಮ ಸಂಸ್ಥೆಗಳ ಹಾ ನಾತನಿಗಳ ಧಾರ್ಮಿಕ ಸ್ವಾತಂ ಗೆ ಧಕ್ಕೆ ಬರದಂತೆ ರಕ್ಷಣೆ ಕೊ ಡುವ ಬಗ್ಗೆ ಸಂಸ್ಥಾನದ ಸನಾತನಿಗಳ ಪರವಾಗಿ ಅಖಿಲ ಕರ್ನಾಟಕ ಸನಾತನ ಸಂಘದವರು ಶ್ರೀಮನ್ಮಹಾಪ್ರಭುಗಳವರಲ್ಲಿ ಅರಿಕೆ ಮಾಡಬೇಕೆಂದು ಮಾನ್ಯ ದಿವಾನರಿಗೆ 'ಮನವಿ' ಯನ್ನು ಅರ್ಪಿಸಲಿರುವರು. ಇದರ ಪ್ರತಿಗಳನ್ನು ಇಷ್ಟರಲ್ಲೇ ಎಲ್ಲಾ ಧರ್ಮ ಪೀಠಗಳಿಗೂ ಸಂಸ್ಥೆಗಳಿಗೂ ಕಳಿಸಿಕೊಡಲಾಗುವುದು. ಅದನ್ನು ಒಪ್ಪಿ ಬೆಂಬಲಕೊಡುವುದರ ಮೂಲಕವಾಗಿಯೂ ಆಯಾ ಸಂಸ್ಥೆಗಳ ಭೆ ಸೇರಿಸಿ ಧರ್ಮ ರಕ್ಷಣೆಯ ಬಂತನ್ನ ಮನವಿಗಳನ್ನು ಇದೇ 25 ನೇ ತಾರೀಖಿನೊಳಗಾಗಿ ರ್ನಾಟಕ ಸನಾತನಿಗಳ ಸಂ ೨೨೮/೨ ಚಾಮರಾಜಪುರಂ ವಿಳಾಸಕ್ಕೂ, ಮಾನ್ಯ ದಿ ಕಳಿಸಿ ಕೊಡಬೇಕಾಗಿ ಳು ತಿಳಿಸುತ್ತಾರೆ.

ಜೈಪ್ರಕಾಶ ನಿಧಿ ಶೇಖರಣೆ

ಪತ್ರಿಕಾ ಸಮ್ಮೇಳನದಲ್ಲಿ ವಿವರಣೆ

———

ಮೈಸೂರು ಫೆ 24 — ' ಭಾರತ ಸಮತಾವಾದಿ ಕಾಂಗ್ರೆಸ್' ನಾಯಕ ಶ್ರೀ ಜೈಪ್ರಕಾಶ್ ನಾರಾಯಣ್, ಕರ್ನಾಟಕ ಯಾತ್ರೆಯನ್ನು ಏಪ್ರಿಲ್ ಎರಡನೆ ವಾರದ ವೇಳೆಗೆ ಕೈಗೊಳ್ಳುವರು. ನಮ್ಮ ಸಂಸ್ಥಾನದಲ್ಲಿ ನಾಲ್ಕು ದಿವಸ ಪ್ರವಾಸ ಮಾಡುವರು. ಇಡೀ ಕರ್ನಾಟಕ ಪ್ರಾಂತ್ಯದಿಂದ ಆ ಮಹಾ ಪುರುಷನಿಗೆ ಒಂದು ಲಕ್ಷ ರೂ. ನಿಧಿ ಸಮರ್ಪಿಸಬೇಕೆಂದು ತೀರ್ಮಾನವಾಗಿದೆ. ನಾವು ರೂ 10000 ಸಂಗ್ರಹಿಸಬೇಕು. ಸರ್ವರೂ ನಿಧಿಗೆ ಸಹಾಯವೀಯಬೇಕು' ಎಂಬುದಾಗಿ ಕಾರ್ಯದರ್ಶಿಗಳಾದ ಶ್ರೀ ಶ್ರೀ ಕಂಠಪ್ಪನವರು ಪತ್ರಿಕಾ ಸಮ್ಮೇಳನದಲ್ಲಿ ತಿಳಿಸಿದರು. ಶ್ರೀ ಭೂಪಾಲ್' ನಿಧಿಯ ಖಜಾಂಚಿಗಳಾಗಿರುವರು ಆಯುರ್ವೇದ ಕಾಲೇಜಿನ ಅವ್ಯವಸ್ಥೆಯನ್ನು ಅಲ್ಲಿನ ವಿದ್ಯಾರ್ಥಿಗಳು ತಿಳಿಸಿದರು.

Epilepsy & Hysteria

CURED FOR EVER

By smelling this wonderful herb when attacked by Fits, a black worm 1-1/4" long will come with the sneeze of the patient. The patient will get a miracle cure of the diseases for ever.

Apply in English to—

Shri 108 Mahatma Sidh Baba
P. O. Nagod (Jubbalpore)

ಈ ವಾರದ ಭವಿಷ್ಯ

(ಓಂ ಜ್ಯೋತಿಷ್ಯರಿಂದ)

ಮೇಷ— ಧನಯೋಗವುಂಟು. ಅಗ್ನಿ ಭಯದಿಂದ ನಷ್ಟವಾಗಬಹುದು.

ವೃಷಭ— ಸುಖ ವಿಜಯ ಲಾಭ ಯಶ ಪ್ರಾಪ್ತಿ. ಶತ್ರುಗಳೂ ಮಿತ್ರರಾಗುತ್ತಾರೆ.

ಮಿಥುನ — ಮನೆಯಲ್ಲಿ ಸುಖ ವಿಜಯ ಲಾಭ. ಯಶ. ಧನಲಾಭ ಸಭಾ ಪೂಜ್ಯತೆ.

ಸಿಂಹ — ಶನಿಯು ಕ್ರೂರವಾಗಿದ್ದಾನೆ. ಜಾಗ್ರತೆ ಅವಶ್ಯಕ.

ಕನ್ಯ — ಸುವರ್ಣ ಲಾಭ ಭೂಲಾಭ, ಗೃಹ ಲಾಭಗಳ ಯೋಗವಿದೆ ಆದರೆ ನ್ಯಾಯ ಮಾರ್ಗದಲ್ಲಿ ನಡೆಯಬೇಕು.

ತುಲ — ದೇಹಾಲಸ್ಯವಿರುತ್ತದೆ. ನಷ್ಟ ಕಲಹಗಳಿರುವಂತೆ ಕಾಣುತ್ತವೆ.

ವೃಶ್ಚಿಕ — ಕ್ರೂರಲವೇ, ಹೆಚ್ಚು ತಾಳ್ಮೆಯಿಂದಿರಿ.

ಧನಸ್ಸು — ಉತ್ತಮ ಫಲ ಪ್ರಾಪ್ತಿಯುಂಟು, ಶತ್ರು ನಿಗ್ರಹ ವಿಜಯ ಯಶಸ್ಸು ಸುಖಗಳುಂಟು.

ಮಕರ — ಯಾರಿಗೂ ಮೋಸ ಮಾಡುವ ಯೋಜನೆಯನ್ನೂ ದೂರ ಮಾಡಿ ಸುಖವಾಗುತ್ತೆ.

ಕುಂಭ — ಆರೋಗ್ಯ ಸಾಮಾನ್ಯವಾಗಿರುತ್ತೆ, ಸುಖ ಲಾಭಗಳುಂಟು.

ಮೀನ — ಕಷ್ಟ ನಷ್ಟಗಳು ಚಿಂತೆ ಕಾರಣವಾಗುತ್ತದೆ ವ್ಯಾಪಾರಿಗಳಿಗೆ ಅಷ್ಟು ಸುಖವಿರುವುದಿಲ್ಲ

———

ಮಂದಿ ಮುಸ್ಲಿಂ
ಂದಿಂದ ಗೌರ್ನಮೆಂ
ಪ್ರವೇಶಸ್ಥಾನಗಳಲ್ಲಿ
ನೆಡೆಸಲಾಯಿತು. ಆ
ಅವರು ವಿಕ್ಟೋರಿಯಾ ರ
ಚೂವಿನ ಮೇಲೆ ಲೀಗ್
ರಿಸಿದರು. — ಲಾಹೋರಿನಲ್ಲಿ
ಮಂತ್ರಿಗಳ ಮನೆಯ ಮು
ಜ್ಞೋಲ್ಲಂಘನೆಗಾಗಿ 52 ದುಂಡಿ
ಗಿರಿ ಮಾಡಲ್ಪಟ್ಟರು—ನಿನ್ನೆ ಅಮೃ
ರದಲ್ಲಿ 600 ಮಂದಿಯು ದಸ್ತಗಿರಿಯಾಯ
ತು—ಸೈಲ್ ಕಾಟಿನಲ್ಲಿ ಪೋಲೀಸರು ದೊಂ
ಬಿಗಾರರ ಮೇಲೆ 6 ಸುತ್ತು ಗುಂಡುಹಾ
ರಿಸಿದರು. ದೊಂಬಿಗಾರರು ಕಲ್ಲು ಎಸೆ
ದುದರಿಂದ 10 ಮಂದಿ ಕಾನ್ಸ್‌ಟೆಬಲ್ಲರಿ
ಗೂ ಒಬ್ಬ ಸಬ್ ಇನ್‌ಸ್ಪೆಕ್ಟರಿಗೂ ಗಾ
ಯವಾಯಿತು.

ಬ್ರೆಡ್ ರೇಷನಿಂಗ್

ಒಟಾವಾ ಫೆ 22 — ಬ್ರಿಟನ್ನಿನಲ್ಲಿ ಬ್ರೆಡ್ ರೇಷನಿಂಗನ್ನು ಕ್ಷಿಪ್ರದಲ್ಲೇ ತೆಗೆದು ಹಾಕುವದಿಲ್ಲ.

ಓಡಿಸಿ ಬಿಟ್ಟರು

ಲಕ್ನೋ ಫೆ 20 — ಜಂಟಿ ಚುನಾವಣಾ ಪದ್ಧತಿಯನ್ನು ಪ್ರತಿವಾದಿಸಿದ್ದಕ್ಕಾಗಿ ಎಂ|| ಮಹಮದ್ದಾಲಿ ಎಂಬುವರನ್ನು ಸಂಯುಕ್ತ ಪ್ರಾಂತ್ಯದ ಮುಸ್ಲಿಂ ಲೀಗ್ ಶಾಸನ ಸಭಾ ಪಾರ್ಟಿಯಿಂದ ಓಡಿಸಿ ಬಿಟ್ಟರು.

ಉರ್ದು ರಾಷ್ಟ್ರ ಭಾಷೆ

ಹೈದರಾಬಾದು ಫೆ 21 — ನೈಜಾಂ ಕಾಲೇಜಿನ ವಜ್ರೋತ್ಸವ ಸಂಬಂಧದಲ್ಲಿ ಮಾತನಾಡುತ್ತಾ ಸರ್ ವಿಜಾರ್ ಇಸ್ಮೇಲರು " ಭಾರತದ ರಾಷ್ಟ್ರ ಭಾಷೆಯಾಗಿರಲು ಯಾವುದಾದರೂ ಭಾಷೆ ಇದ್ದರೆ ಅದು ಉರ್ದು " ಎಂದರು.

ಪಂ| ನೆಹರು

ನವದೆಹಲಿ ಫೆ 23 — ಪಂ|| ನೆಹರು ರವರು ವೈಸರಾಯಿ ನೇವಲ್ಲರನ್ನು ಭಾರತದ ಹಿತಕ್ಕಾಗಿ ದುಡಿದರೆಂದು ಪ್ರಶಂಸಿಸಿದ್ದಾರೆ.

ಕಾಂಗ್ರೆಸ್ ಬಾವುಟ ಸುಟ್ಟರು

ಪೆಷಾವರ ಫೆ 22 — ಗಡಿನಾಡಿನ ದಬ್ಬಾಳಿಕೆ ಶಾಸನಗಳನ್ನು ಮುರಿಯಲು ಲೀಗಲು ವಾದ್ ಕೌನ್ಸಿಲ್ ನೇಮಿಸಿದ್ದಾರೆ ಮುಖ್ಯ ಮಂತ್ರಿ ತಮ್ಮ ಮನೆ ಬಾಲ್ಕನಿಯಿಂದ ಭಾಷಣ ಮಾಡಿದರು. ದೊಬಿಗಾರರು ಕಿಟಕಿ ಹೊಸಿ ಕುಂಡಗಳನ್ನು ಒಡೆದು ಹಾಕಿದರು. ಕಾಂಗ್ರೆಸ್ ಬಾವುಟವನ್ನು ಹುರಿದು ಸುಟ್ಟು ಹಾಕಿದರು.

...ಾಹಸ !

...ಾಂಧಿಯವರು ಪೂರ್ವ ... ಪಾದಚಾರಿಯಾಗಿ ... ಮಾಡಲಾರಂಭಿಸಿದ ...ಲ್ಲಿ ಅವರ ಅನುಚರಳಾದ ...ಶೀಲ ನಾಯರು ಮತ್ತೆ ಕೆಲ ...ಂದಿ ಕಲೆತು. ಗಾಂಧೀಜಿ ಬರು ...ಕ್ಕೆ ಮುಂಚೆ ಒಂದು ಗ್ರಾಮ ಕ್ಕೆ ...ೋಗುವ ...ಸ್ಥೆಯನ್ನು ಸರಿಪಡಿಸುತ್ತಿ ದ್ದರು. ಆ ಸಮಯದಲ್ಲಿ ಮನಸ್ಸಿನ ಲ್ಲಿ ಬೇಜಾರಿಲ್ಲದಿರಲು ರಾಮಭಜನೆಯ ನ್ನೆ ಮಾಡುತ್ತಿದ್ದರು. ಕೂಡಲೇ ಪಕ್ಕದ ಹೊಲಗಳಲ್ಲಿದ್ದ ಮುಸ್ಲಿಮರು ಬಂದು 'ನೀವು ಹಾಗೆ ರಾಮಭಜನೆ ಯನ್ನು ಮಾಡುತ್ತಿದ್ದಲ್ಲಿ ನಮ್ಮ ಸೋ ದರ ಮುಸ್ಲಿಮರಿಗೆ ಉದ್ರೇಕವುಂಟಾಗಿ ಗಲಾಟೆಯಾಗುತ್ತವೆ' ಎಂದು ಹೇಳಿದ ರಂತೆ. ಅವರು ಎಷ್ಟೋ ವಿತಂಡವಾದ ವನ್ನು ಮಾಡಿ ಕೊನೆಗೆ 'ಹೇಳಿದ್ದೇನೆ. ಕೇಳಿದರೆ ಕೇಳಿ, ಇಲ್ಲವಾದರೆ ಅನುಭ ವಿಸಿ' ಎಂದು ತಿಳಿಸಿದರಂತೆ. ಆಗ ಡಾ | ಸಾಶೀಲ ನಾಯರು ಹೆಂಗಸಾದ ರೂ, ಅವರ ಎದುರಿಗೆ ಹೋಗಿ "ಹಾ ಗಾದರೆ ರಾಮಧ್ವನಿ ಮಾಡುತ್ತಿರುವು ದಕ್ಕಾಗಿ ನನ್ನನ್ನು ಕೊಂದು ಹಾಕಿ" ಎಂದು ಧಿಕ್ಕರಿಸಲು, ಅವರು ನಿರುತ್ತ ರರೂ, ನಿರ್ವ್ಯಾಪಾರಿಗಳೂ ಆಗಿ ಪುನಃ ಹೊಲಗಳಿಗೆ ತಮ್ಮ ಕೆಲಸಗಳ ಮೇಲೆ ಹೊರಟುಹೋದರಂತೆ.

——

ಲಕ್ನೋ ಫೆ 14 — ಸಂಯುಕ್ತ ಪ್ರಾಂತ್ಯದಲ್ಲಿನ 590 ಮುಸ್ಲಿಂ ಬಿರುದು ಗಾರರ ಪೈಕಿ 72 ಮಂದಿ ಮಾತ್ರ ತ ಮ್ಮ ಬಿರುದನ್ನು ತ್ಯಜಿಸಿರುವುದಾಗಿ ಇ ಲ್ಲಿಯ ಶಾಸನ ಸಭೆಯಲ್ಲಿನ ಒಂದು ಪ ಶ್ನೆಗೆ ಸರ್ಕಾರಿ ಉತ್ತರವಾಯಿತು

ಬೆಂಗಳೂರು ಫೆ 17 — ಈ ದಿವಸ ನಡೆದ ಮೈಸೂರು ಕಾಂಗ್ರೆಸ್ ಕಾರ್ಯ ಕಾರಿ ಮಂಡಲಿಯಲ್ಲಿ ವೈಸೂರು ದಿವಾನರು ಮೈಸೂರು ರಾಜ್ಯಾಂಗ ಸು ಧಾರಣೆ ಬಗ್ಗೆ ಕೇವಲ ಕಾಲ ತಳ್ಳು ತ್ತಿರುವರೆಂದೂ ಆದುದರಿಂದ ಕಾಂಗ್ರೆಸ್ಸು ಸತ್ಯಾಗ್ರಹ ಚಳುವಳಿಯನ್ನು ಆರಂಭಿಸ ಬೇಕೆಂದೂ ತೀರ್ಮಾನಿಸಿರುವುದೆಂದೂ ಸತ್ಯಾಗ್ರಹ ಪ್ರಾರಂಭಿಸುವ ಕಾಲವನ್ನು ಮಾರ್ಚಿ 1 ಮತ್ತು 2 ನೇ ತಾರೀಖು ಗಳಲ್ಲಿ ಕೋಲಾರದಲ್ಲಿ ನಡೆಯಲಿರುವ ಅಖಿಲ ಮೈಸೂರು ಕಾಂಗ್ರೆಸ್ ಕಮಿ ಟಿ ಮುಂದೆ ನಿರ್ಧರಿಸಲಾಗುವುದೆಂದೂ ತಿಳಿಯಬಂದಿದೆ.

ಬದುಕು

ಸುಭಾಸ್ ಬೋಸರ ಸಾವು ಬದುಕು ಗಳ ಮೇಲೆ ಸಹಸ್ರ ಸಹಸ್ರ ಅಭಿಪ್ರಾ ಯಗಳು ಹೊರಬಂದುವು. ಒಬ್ಬರು ಸತ್ತರೆಂದು ಸಾಧಿಸಿದರೆ ಮತ್ತೊಬ್ಬರು ಬದುಕಿರುವರೆಂದು ಘೋಧಿಸುತ್ತಿದ್ದಾರೆ, ಈ ವಾದವಿವಾದ ನಿಲ್ಲುವಂತಿಲ್ಲ ! ಈ ಬಗೆ ಸುದ್ದಿ ಸೋಲುವಂತಿಲ್ಲ ! ಅಖಿಲ ಭಾರತ ಫಾರ್ವರ್ಡ್ ಬ್ಲಾಕು ಸದಸ್ಯ ಶ್ರೀ ಎಸ್. ಗಂಗೂಲಯವರು ನಿನ್ನೆತಾನೆ ಘಂಟಾಘೋಷವಾಗಿ ಹೇಗೆಂದಿದ್ದಾರೆ—

'ಸುಭಾಸ್‌ರು ಖಂಡಿತಾ ಕಲ್ಲುಂ ಡಾಗಿದ್ದಾರೆ ಸಮಯ ನೋಡಿಕೊಂ ಡು ಸ್ವಾತಂತ್ರ್ಯ ಸಾಧಿಸಲು ಹೊರ ಬಂದೇ ಬರುತ್ತಾರೆ ಕಾಯಿರಿ.''

ಕಾದು ನೋಡೇ ಬಿಡೋಣ! ಎಲ್ಲೇತಂಕ ಕಾಯುವುದು ?!

——

ಅವಶ್ಯಬಿದ್ದರೆ ನಾಣ್ಯಗಳಲ್ಲಿ ಬೆಳ್ಳಿ ಕಡಮೆ ಮಾಡುವ ಕುರಿತು ಆಸ್ಟ್ರೇಲಿ ಯ ಸರಕಾರದವರು ವಿಚಾರಿಸುತ್ತಿ ದ್ದಾರೆ. ಮತ್ತು ಬ್ರಿಟನ್ನಿನವರು ಈ ಗಾಗಲೇ ಬೆಳ್ಳಿ ನಾಣ್ಯಗಳನ್ನು ಹೊರಡಿ ಸುವುದನ್ನು ನಿಲ್ಲಿಸಿ ಅದರ ಬದಲು ತಾಂ ಬ್ರ, ನಿಕ್ಕಲ್ಲು ನಾಣ್ಯಗಳನ್ನು ಹೊರಡಿ ಸುವರು.

ಮನಿಯಾಪೊಲಿಸ್ ಫೆ 18— ಶ್ರಿಜಿ ಯಸ್ ಮತ್ತು ಯಹೂದ್ಯರ ರಾಷ್ಟ್ರೀ ಸಮ್ಮೇಳನದಲ್ಲಿ ಭಾಷಣ ಮಾಡುತ್ತಾ ವಿಶ್ವಸಂಸ್ಥೆಯ ಸೆಕ್ರಿಟರಿ-ಜನರಲ್ ಮಿ|| ಟಿಗ್ವೆ ಲೈಯರು ಯಾವ ದೇಶವೂ ಯು ದ್ಧ ಮಾಡಲು ಇಚ್ಛೆ ಪಡುತ್ತಿಲ್ಲವೆಂದೂ ಅಲ್ಲದೆ ಯುದ್ಧ ಮಾಡಿದ ಎಲ್ಲಾ ರಾ ಜ್ಯಗಳೂ ನಷ್ಟಗೊಂಡಿವೆಯೆಂದೂ ಹೇ ಳಿದರು

ಂ ಂ

ನ್ಯೂಯಾರ್ಕಿನ ಒಂದು ವ್ಯಾಪಾರ ಸಂಸ್ಥೆ ವಿಚಿತ್ರ ಜಾಹಿರಾತು ಪ್ರಕಟಿಸಿ ದೆ—5 ಸಾವಿರಕ್ಕೆ ಮೇಲ್ಪಟ್ಟು ವರ್ಷ ವಮಾನ ವಿರುವ ಒಂದು ಸಾವಿರ ವಿಧವೆಯರಿಂ ಹೆಸರು ಪಟ್ಟಿಗೆ 3 ಪೌಂಡು ಗಳು, ಮತ್ತು 15 ವರ್ಷಕ್ಕೆ ಕಮ್ಮಿ ವ ಯಸ್ಸಿನ ಮಕ್ಕಳಿರುವ ಕೋಟ್ಯಾಧೀಶ್ವ ರರ ಹೆಸರು ಪಟ್ಟಿಗೆ 5 ಪೌಂಡು !

ಂ ಂ

ಬ್ರಿಟನ್ನಿನಲ್ಲಿ ತಯಾರಾದ ಟೀರ್ ಗ್ಯಾಸಿಗೆ ಭಾರತವೇ ಭಾರಿ ಗಿರಾಕಿ ಎಂ ದು ಮಾಜಿ ಕಲ್ಕತ್ತಾ ಪೋಲೀಸು ಕಮಿ ಷನರ್ ಸರ್ ರಿಜಿನಾಲ್ಡ್ ಕ್ಲಾರ್ಕರು ಹೇಳಿರುವರಂತೆ.

ಚಾಂದಪುರ ಫೆ 15 — ಮಹಾತ್ಮಾ ಗಾಂಧಿಯವರು ಮಂತ್ರಿಮಂಡಲ ಬಿಕ್ಕಟ್ಟಿನ ಸಂಬಂಧವಾಗಿ ಅತಿ ಮು ಖ್ಯವಾದ ಪತ್ರವನ್ನು ಪಂ|| ನೆಹರೂರವ ರಿಗೆ ಬರೆದಿರುವರೆಂದು ಹೇಳಲಾಗಿದೆ.

ನವದೆಹಲಿ ಫೆ 17 — ಇನ್ನು ಮುಂ ದೆ ರೂಪಾಯಿ ನಾಣ್ಯವೂ ನಿಕ್ಕಲ್ಲಿನ ಲ್ಲಿ ಹೊರಡಿಸಲಾಗವುದೆಂದು ಹೇಳಲಾ ಗಿದೆ.

ನವದೆಹಲಿ ಫೆ 17 — ಮಾರ್ಚಿ 1 ರಿಂದ ರೈಲ್ವೆ ದರ ರೂಪಾಯಿಗೆ 1 ಆಣೆ ಯಂತೆಯೂ ಕೆಲವು ಗೂಡ್ಸ್‌ಗಳ ದರ ವೂ ಏಪ್ರಿಲ್ 1 ರಿಂದ ಹೆಚ್ಚಿಸಲಾಗುವು ದೆಂದೂ ಕೇಂದ್ರ ಶಾಸನ ಸಭೆಯ ಮುಂ ದೆ ಬಂದ ರೈಲ್ವೆ ಬಡ್ಜೆಟ್ ವಿವರದಲ್ಲಿ ತಿಳಿ ಸಲಾಯಿತು.

ದಕ್ಷಿಣ ಕನ್ನಡ ಜಿಲ್ಲೆಗೂ ಮೈಸೂ ರು ಸಂಸ್ಥಾನದ ಉತ್ತರ ಜಿಲ್ಲೆಗಳಿಗೂ ರೈಲ್ವೇ ಸಂಚಾರ ಸೌಕರ್ಯ ಏರ್ಪಡಿ ಸುವ ಒಗ್ಗ ತಾವು ಕೇಂದ್ರ ಸರಕಾರವ ನ್ನು ಒತ್ತಾಯಪಡಿಸುವುದಾಗಿ ಮದ ರಾಸಿನ ವ್ಯವಸಾಯ ಸಚಿವರು ಮದ್ರಾ ಸ್ ನ್ಯಾಯವಿಧಾಯಕ ಸಭೆಯಲ್ಲಿ ತಿಳಿ ಸಿರುತ್ತಾರೆ

ಮದರಾಸು ಫೆ 19 — ಮದರಾಸು ಮಹಾ ಪ್ರಧಾನರಾದ ಶ್ರೀ ಪ್ರಕಾಶಂ ರವರು ದೆಲ್ಲಿಯಿಂದ ಹಿಂದಿರುಗಿದರು. ತಮ್ಮ ಮೇಲಿನ ಅವಿಶ್ವಾಸ ಠರಾವಿನ ಬಗ್ಗೆ ಶಾಸನಸಭಾ ಕಾಂಗ್ರೆಸ್ಸು ಪಾರ್ಟಿ ಮೀಟಿಂಗನ್ನು ತಾ || 28 ಕ್ಕೆ ಇಟಿ ರುವರು. ಈ ಮಧ್ಯೆ ಈ ವಿಷಯ ಪ ರ್ಯಾಲೋಚಿಸಲು ತನ್ನ ಅಧ್ಯಕ್ಷತೆಯಲ್ಲಿ ಒಂದು ವಿಚಾರಣಾ ಸಮಿತಿಯನ್ನು ನೇ ಮಿಸಿರುವಳು.

ಸಂಯುಕ್ತ ಅಮೇರಿಕಾದ ಅಧ್ಯಕ್ಷ ಪದವಿಯನ್ನು ಎರಡು ಸಲಕ್ಕಿಂತ ಹೆ ಚ್ಚಾಗಿ ಯಾವ ಅಧ್ಯಕ್ಷರೂ ಹೊಂದ ಕೂಡದೆಂಬ ತಿದ್ದುಪಡಿಯು ಪ್ರತಿನಿಧಿ ಸಭೆಯಲ್ಲಿ ಬಹುಮತದಿಂದ ಅಂಗೀ ಕೃತವಾಯಿತು.

ಟೊರೆಂಟೋದಲ್ಲಿ ಟ್ರಾಫಿಕ್ ನಿಯ ಮಗಳು ಒಹಳ ವಿಚಿತ್ರ ರೀತಿಯದಾಗಿ ದೆ. ಅಲ್ಲಿ ಲಿಸ್ಟೆಗಳು ತಿರುಗುವಲ್ಲಿ ದಾರಿಹೋಕರು ಕೈಗಳನ್ನು ಮೇಲಕ್ಕೆತ್ತ ಬೇಕೆಂಬ ನಿಯಮವಿದೆ.

ಮಾಥೇ ನ್ಯೂಸ್‌ರವರು ಬಂಗಾಳ ಕೊಲ್ಲಿಯಲ್ಲಿ ಬೆಸ್ಕರು ಅಪಾಯಕಾರಿ ಶಾರ್ಕ್‌ಗಳನ್ನು ಬೇಟಿಯಾಡುವ ಸನ್ನಿ ವೇಶವನ್ನು ನ್ಯೂಸ್ ಚಿತ್ರಕ್ಕೆ ತಯಾರಿಸ ಲು ನಿಶ್ಚೈಸಿ ಆ ಕಡೆಗೆ ಹೋಗಿರು ತ್ತಾರೆ.

ನಾವು ರಾಜಕೀಯದಿಲ್ಲ ಸುತ್ತಿರುವ ತೊಂದರೆಗಳನ್ನು ಪರಿಹ ತೆಗೆದುಕೊಳ್ಳದೇ ಇದ್ದು, ರಾಜದಂಡ ಗಳ ಭೇಟಿಗೆ ಇದನ್ನು ಸಂಬಂಧಿಸದೇ ಇರಬೇಕೆಂದೂ, ಯಾವ ವಿಧದ ಬಹಿ ಷ್ಕಾರ ಚಳುವಳಿಯನ್ನಾಗಲೀ ಏರುದ್ಧ ಪ್ರದರ್ಶನವನ್ನಾಗಲೀ ನಡೆಸದಿರಬೇಕ ದೂ, ಪಂ|| ನೆಹರೂ ಹೈ ಕವಿ ಷ ಮೂಲಕ ಇಲ್ಲಿಯವರಿಗೆ ತಿಳಿಸಿದ್ದಾರೆ.

ಂ ಂ

ಪ್ಯಾರಿಸ್ ಫೆ 21 — ಆಟ್ಲಿಯವರ ಭಾರತಕ್ಕೆ ಸ್ವಾತಂತ್ರ್ಯವನ್ನು ಜ 1948 ರೊಳಗೆ ಕೊಡಲಾಗವುದೆ ಹೇಳಿರುವ ವಿಷಯ ಫ್ರಾನ್ಸಿನಲ್ಲಿ ಆ ರ್ಭಾವನ್ನುಂಟುಮಾಡಿದೆ ಈ ಹೇಳಿ ಯಿಂದ ಇಂಡೋನೇಷಿಯಾಕ್ಕೆ ಸಹ ಚರೂ ಸ್ವಾತಂತ್ರ್ಯಕೊಡುವಂತಾಗ ದೆಂದು ಹೇಳಲಾಗಿದೆ.

ಂ ಂ

ಷಾಂಗ್ಹಾ ಫೆ 18 — ಚೈನಾವು ಬರ್ಮಾ ಮತ್ತು ಸಯಾಂನಿಂದ ಅಕ್ಕಿ ಕೊಳ್ಳುವದು.

ಂ ಂ

ಹಿಂದೂಗಳ ಸ್ಥಳಾಂತರಕ್ಕೆ ಗಾ ಧೀಜಿ ಒಪ್ಪಿರುವರೆಂದೂ. ಆದ ಸ್ಥಳ ಬಿಟ್ಟುಹೋಗಲು ಅ ಸಿಕ್ಕಜೇಕೆಂದಿರುವರೆಂದ ಒಂದಿದೆ.

ಂ

ಲಂಡನ್ ಫೆ 19 — 10 ಸಾವಿರ ಟನ್ ರಬ್ಬರನ್ನು ಕೊಳ್ಳಲಾಗಿದಯೆಂದು ಕಾ ಯಲ್ಲಿ ಒಂದು ಪ್ರಶ್ನೆಗೆ ಯಿತು

ಂ ಂ

ಲಂಡನ್ ಫೆ 20— ಈ ದಿವಸ ಮನ್ನು ಸಭೆಯಲ್ಲಿ ಬ್ರಿಟಿಷ್ ಮ ಪ್ರಧಾನರಾದ ಮಿ || ಆಟ್ಲಿಯವರು ಕೊ ಟ್ಟಿರುವ ಹೇಳಿಕೆಯಲ್ಲಿ 1948 ನೇ ಜೂನ್ ಹೊತ್ತಿಗೆ ಭಾರತವನ್ನು ಜವಾಬ್ದಾರಿ ಯುತವಾದ ಭಾರತೀಯರಿಗೆ ನಹಿಸಿ ಕೊಡಲಾಗುವುದೆಂದರು. ಭಾರತ ವೈಸರಾಯರಾದ ವೇವಲ್ಲರಿಗೆ ಪದವಿ ಕೊಡಲಾಗುವುದ ಸ್ಥಾನದಲ್ಲಿ ಲಾರ್ಡ್ ನ್ಸರನ್ನು ಮಾರ್ಚಿಯಿ ರಾಗಿ ನಿಯಮಿಸಲಾ ಹೇಳಿರುವರು. ಚರ್ಚಿಲ್ಲರು ಆ ಹಾಕಿದರು.

॥ ಶ್ರೀ ॥

"ಪ್ರಬೋಧ"

ಮೈಸೂರು ದೇಶೀಯ ವರ್ಣಾಶ್ರಮ ಸ್ವರಾಜ್ಯ ಸಂಘದ
ಬೋಧಪ್ರದ ಸಪ್ತಾಹಿಕ ಪ್ರಕಟನಮಾಲೆ
ಸಂಪಾದಕ– ಗುಂಡ್ಮಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇಗಾರತವಿಶಾರದ
ಸಂಘದ ಕಾರ್ಯದರ್ಶಿ. ದೂರ್ವಾಸಪುರಂ, ಶಿವಮೊಗ್ಗಾ ಜಿಲ್ಲಾ

ಸಂ

ವಂತನ ಭಕ್ತರನ್ನು ಹುಡುಕುತ್ತಾನೆ. ನೀರು ಸ್ವಭಾವದಿಂದಲೇ ಕೆಳಕಳಗೆ ಹೋಗುವಂತೆ ಸಂಪತ್ತಿಯೂ ಭಕ್ತರ ಬಳಿಗೆ ಹೋಗುತ್ತದೆ. 'ಭಗವಂತನನ್ನು ಬಿಟ್ಟು ನನ್ನನ್ನಪೇಕ್ಷಿಸುವವರ ಒಳಗೆ ನಾನು ಹೇಗೆ ಹೋಗಬಲ್ಲೆನು?' ಎಂದು ಸ್ವಯಂ ಲಕ್ಷ್ಮಿಯೇ ಹೇಳುತ್ತಾಳೆ. ಪತಿವ್ರತೆಯಾದ ಲಕ್ಷ್ಮಿಯು ಪತಿಯು ಇರುವಲ್ಲಿ ತಾನೂ ನೆಲೆಸುವಳು, ನಾರಾಯಣನೊಟ್ಟಿಗೆ ಅಚಂಚಲೆಯಾಗಿದ್ದು ಬೇರೆಡೆಯಲ್ಲಿ ಚಂಚಲೆಯೇ ಆಗಿರುತ್ತಾಳೆ. ರಾವಣ ಹಿಂಣ್ಯಾಕ್ಷರಲ್ಲಿಯಾದರೋ ಮಾಯೆಯಿದ್ದುದು ಲಕ್ಷ್ಮಿಯಾಗಲೀ ಸೀತೆಯಾಗಲೀ ಅಲ್ಲ, ಬರಿಯ ಛಾಯೆ ಮಾತ್ರ ಅಲ್ಲಿದ್ದಿತು. ಅದರಿಂದ ಲಕ್ಷ್ಮಿಯು ಬಯಸಿಕೆಯಿದ್ದರೆ ಭಗವಂತನನ್ನಾದರಿಸಿರಿ. ಭಕ್ತಿಯು ಕಡೆಗೆ ಮುನ್ನಡೆಯುವವರೆಡೆಗೆ ಮಾಯೆಯು ಸಿದ್ಧಿ ಬುದ್ಧಿ ಮುಂತಾದುದನ್ನು ಕಳುಹಿಸಿ ಪೋಷ್ಣ ಮಾಡುತ್ತದೆ. ಅದರಿಂದ ಎಚ್ಚೆತ್ತಿರಬೇಕು. ಒಮ್ಮೆ ಬ್ರಹ್ಮ ಹೇಳುವನು — 'ಓ ಪ್ರಭುವೇ! ಈ ವ್ರಜವಾಸಿಗಳಾದ ಭಕ್ತಂ ಋಣದಿಂದ ಹೇಗೆ ಮುಕ್ತನಾಗುವೇ?' ಪ್ರಭುವು ಹೇಳುವನು — 'ನಾನು ಅನಂತಕೋಟಿ ಬ್ರಹ್ಮಾಂಡನಾಯಕ ಬೇಕಾದದ್ದು ಕೊಡುವವನು' ಉದ್ಧವನು ಹೇಳುವನು — 'ಹೌದೌದು, ಅದು ನನಗೂ ಗೊತ್ತು. ಆದರೆ ಸಂಗತಿ ಹೀಗಿದೆ – ಈ ಸಮಸ್ತ ಲೌಕಿಕ ಆನಂದಗಳಾದರೋ ಆನಂದವಾದ ನಿನ್ನ ಬಂಧುಗಳು. ಹೀಗಾಗಿ ಸಿಂಧುವಿನ ಮುಂದೆ ಬಿಂದುವನ್ನು ಒಯ್ಯಕೆಯಾರು ಮಾಡಿಯಾರು?' ಪ್ರಭು ಹೇಳುವನು — 'ಹಾಗಾದರೆ ಸಿಂಧು ಸ್ವರೂಪನಾದ ನಾನು ನನ್ನನ್ನೇ ಕೊಟ್ಟು ಬಿಟ್ಟು ಋಣ ಮುಕ್ತನಾಗಿ ಬಿಡುವೆ.'

ಆಗ ಬ್ರಹ್ಮ ಹೇಳುವನು — 'ಸ್ವಾಮಿ, ಅದಾವುದೋ ನೀನು ಪೂತನೆಯಂತಹ ಲೋಕ ಬಾಲಘ್ನಿಯಾದ ರಾಕ್ಷಸಿಗೂ ಕೊಟ್ಟು ಬಿಟ್ಟೆ, ಮತ್ತೆ ಯಾರು ನಿನ್ನೇ ನಿನ್ನ ಮೇಲೆ ಒಪ್ಪಿಸಿರುವವರಿಗೂ ಅದೇ ಕೊಟ್ಟುದಾ ಅನ್ಯಾಯವೇ ಆಯಿತು ನುಡಿದ — 'ಹಾವರಿಗೆ ಋಣಿಯಾಗಿಯೇ ಯಾವಾಗ ಏನು ನಿಂದ ಪಡೆದು ಕೊಳ್ಳ ಸಜ್ಜನರೇ! ಸ್ವಲ್ಪ ಭಕ್ತಿ ಮಾಡಿಯೂ ನೋಡಿರಿ, ಅದರಿಂದ ಎಲ್ಲವೂ ದೊರೆಯುವುದು ಆದರೆ ಮಾಡದ ಫಲವೀಯುವುದಿಲ್ಲ. ಒಂದೆರಡು ಸಲ ಅಸಫಲರಾದಾಗ್ಯೂ ವ್ಯಾಪಾರ ದೇಸಾಯ ಮುಂತಾದುವನು ಬಿಡದಿರುವಂತೆ ಇದನ್ನೂ ಬಿಡಬೇಡಿರಿ. ಏನಾದರೂ ತ್ರುಟಿಯುಂಟಾಗಿದ್ದರೆ ಸರಿಪಡಿಸಿಕೊಳ್ಳಿರಿ, ಒಂದೊಂದು ಸಾರಿ ಭಜನೆಯನ್ನು ಬಿಡಿಸುವುದಕ್ಕಾಗಿ ದುಃಖವೂ ಒದಗುತ್ತದೆ. ಆದರೆ ಶೂರಧೀರರಾದವರು ಅದನ್ನು ಬಿಡುವುದಿಲ್ಲ. ಸ್ವಧರ್ಮದ ಜ್ಞಾನವೂ ಅವಶ್ಯಕ. ಕರ್ಮದ ವಿಷಯದಲ್ಲಿ ಯೋಗಿಗಳಿಗೂ ವ್ಯಾಮೋಹವುಂಟಾಗಿ ಬಿಡುತ್ತದೆ, ಹೀಗಿರುವಾಗ ನೀವು ಕರ್ಮವನ್ನು ಮಾಡುವುದೇ ಇಲ್ಲವಾಗಿರುವಾಗ ಆದನ್ನು ಬಿಡುವುದೇನನ್ನು? ಅಲ್ಲದೆ ಯಜ್ಞ, ದಾನ, ತಪಸ್ಸನಾದರೋ ಎಂದೂ ಬಿಡಬಾರದು — 'ಯಜ್ಞೋ ದಾನಂ ತಪಶ್ಚೈವ ನ ತ್ಯಾಜ್ಯಂ ಕಾರ್ಯ ಮೇವ ತತ್' ಈ ಕಾಲದಲ್ಲಿಯೂ ನಾಸ್ತಿಕ ಪಕ್ಷವನ್ನು ಗ್ರಹಣ ಮಾಡುವವರಿದ್ದರೂ ಒಮ್ಮೆ ಜಾಬಾಲಿಯೂ ಹೀಗೆ ಮಾಡಿದ್ದನು, ಇಂದಿನ ನಾಸ್ತಿಕರು ಆತನನ್ನೇ ಅನುಕರಿಸುವರು. ಯಜ್ಞ–ದಾನಗಳಿಂದ ಪ್ರಸನ್ನರಾಗಿ ದೇವತೆಗಳು ಮನುಷ್ಯರಿಗೆ ಬೇಕಾದ್ದನ್ನು ಕೊಡುವರು ಅವರಿಗೆ ಅರ್ಪಿಸದೆ ಭೋಗಿಸುವವರು ಕಳ್ಳರು ಆಹಾರವನ್ನು ಕೊಡುವುದು ಒಂದೋ ಪ್ರಕೃತಿ ಇಲ್ಲವೆ ಭಗವಂತನು. ಲೋಕದ ಸ್ಥಿತಿಯು ಯಜ್ಞದಾನಾದಿಗಳಿಂದ ಇಂದಿನ ಸಾಮ್ಯವಾದದಿಂದಾದರೂ ತೆಗೆದುಕೊಳ್ಳುವವರು 'ತೆಗೆದುಕೊಳ್ಳುವೆವು, ತೆಗೆದುಕೊಳ್ಳುವೆವು. ಸತ್ತೂ ತೆಗೆದುಕೊಳ್ಳುವೆವು' ಎನ್ನುತ್ತಾರೆ; ಕೊಡುವವರು 'ಕೊಡುವುದಿಲ್ಲ, ಕೊಡುವುದಿಲ್ಲ ಸತ್ತರೂ ಕೊಡುವುದಿಲ್ಲ' ಎನ್ನುತ್ತಾರೆ. ನಮ್ಮ ಆದರ್ಶವಾದರೋ 'ಪ್ರತಿಗ್ರಹ ಸಮರ್ಥೋಽಪಿ ಪ್ರಸಜ್ಜೇತ ತತ್ರ ವರ್ಜಯೇತ' (ದಾನಹಿಡಿಯಲು ಶಕ್ತನಾದರೂ ಅದರಿಂದ ದೂರವಿರಬೇಕು) ಎಂಬುದಾಗಿದೆ. ಅತಿಥಿಯು ಯಾವುದೇ ಜಾತಿಯವನಾದರೂ, ಅತನನ್ನು ವೈಶ್ವಾನರೆನೆಂದೆಣಿಸಿ ಸತ್ಕರಿಸಬೇಕು. ಕುಂತಿದೇವಸ್ತು ಚಂಡಾಲಗರೂ ನಾಯಿಗಳಿಗೂ ಊಣಬಡಿಸಿ, ಭಗವಂತನನ್ನು ಕುರಿತು 'ಪರಮಾತ್ಮನ್! ಸಮಸ್ತ ಪ್ರಪಂಚದ ದುಃಖವು ನನಗೇ ಸಿಕ್ಕಲಿ, ಪ್ರಪಂಚವು ಸುಖವಾಗಿರಲಿ' ಎಂದು ಪ್ರಾರ್ಥಿಸಿಕೊಂಡಿರುವನು. ಇದೀಗ ನಮ್ಮ ಸಾಮ್ಯವಾದ! ಮುಷ್ಟಿ ಮಾತ್ರ ಅನ್ನ ಕೊಡುವುದರಿಂದ ಅನಂತ ಪಾಪಗಳು ನಾಶವಾಗುತ್ತವೆ, ಅದರಲ್ಲಿಯೂ ನ್ಯಾಯದಿಂದ ಗಳಿಸಿದ್ದರಲ್ಲಿ ಸ್ವಲ್ಪ ಮಾತ್ರ ಕೊಟ್ಟರೂ ಅನ್ಯಾಯದ ಲಕ್ಷಾಂತರ ದಾನಕ್ಕಿಂತ ಶ್ರೇಷ್ಠವಾದುದು.

ಆದರೆ ದಾನವನ್ನು ವಿಚಾರಪೂರ್ವಕವಾಗಿ ಮಾಡಬೇಕು. ಒಬ್ಬನು ನಿಮ್ಮ ದಾನದ ದುಡ್ಡಿನಿಂದ ಕಬ್ಬಿಣನ ಮುಳ್ಳನ್ನು ಕೊಂಡುಕೊಂಡು ವಿಾನು ಹಿಡಿಯುತ್ತಾನೆ, ಇನ್ನೊಬ್ಬನು ಅದರಿಂದಲೇ ಹತ್ತಿಯನ್ನು ತಂದು ದೇವರಿಗೆ ದೀಪ ಉರಿಸುತ್ತಾನೆ. ಇದೇ ಪ್ರಕಾರ ಸ್ಕೂಲು, ಕಾಲೇಜು, ಯೂನಿವರ್ಸಿಟಿ ಮೊದಲಾದವುಗಳು ಭಯಂಕರ ನಾಸ್ತಿಕರನ್ನು ಹೆಚ್ಚಿಸುವ ಫ್ಯಾಕ್ಟರಿಗಳಾಗಿವೆ. ಇವುಗಳಿಗಿಂತ ದಾನದಿಂದ ಹಾನಿ ಇಲ್ಲದೆ ಲಾಭವಿಲ್ಲ. ದಾನಕ್ಕೆ ಅಧಿಕಾರಿಗಳು ಗೃಹಸ್ಥ ಬ್ರಾಹ್ಮಣರೇ ಹೊರತು ಅನ್ಯರಲ್ಲ. ಅದರಲ್ಲಿಯೂ ಜನ್ಮ ಮಾತ್ರದ ಬ್ರಾಹ್ಮಣನಲ್ಲಿ ಸಮಾನಫಲ, ವೇದವೋದಿದವನಲ್ಲಿ ಸಹಸ್ರ ಮಡಿ ಮಿಗಿಲು ವೇದ ಪಾರಂಗತನಲ್ಲಿ ಅನಂತಫಲವುಂಟಾಗುತ್ತದೆ. ದೇಶ, ಕಾಲ ಪಾತ್ರಗಳಿಗೆ ವಿರುದ್ಧವಾಗಿ ಇತ್ತ ದಾನದ ಫಲವನ್ನು ನಾಯಿ ಮುಂತಾದ ಯೋನಿಗಳಲ್ಲಿ ಜನ್ಮವೆತ್ತಿ ಭೋಗಿಸಬೇಕಾಗುವುದು. ಉದಾಹರಣೆಗೆ-ಹಲವರಿಗೆ ದಾನದ ಫಲದಿಂದ ಒಳ್ಳೆಯ ತಿಂಡಿ-ತೀರ್ಥ, ತೊಡಿಗೆ ಮೋಟಾರು ಮುಂತಾದುವಾದರೋ ಸಿಕ್ಕುತ್ತವೆ. ಆದರೆ ಯಾರು ದೊಡ್ಡ ಮನುಷ್ಯರ ಮನೆಯ ನಾಯಿ ಮುಂತಾಗಿ ಹುಟ್ಟಿ! ಆದುದರಿಂದ ವೇದ ಸಂಸ್ಕೃತ ವಿದ್ಯೆ ಮುಂತಾದುವುಗಳ ವಿಶೇಷ ಗೊತ್ತಿದ್ದವರಿಗಾಗಿಯೇ ದಾನ ಕೊಡುವುದು ಶ್ರೇಷ್ಠವಾದುದು. ಯಾವಾಗ ದಾನಿಗಳು ಹರಿಶ್ಚಂದ್ರ ದಶರಥರಂತಾಗುವರೋ ಆಗ ತೆಗೆದುಕೊಳ್ಳುವವರೂ ವಸಿಷ್ಠ ವಿಶ್ವಾಮಿತ್ರರಂಥವರಾಗುವರು. ಇಂದೀಗ ಎಂಥ ದಾನಿಗಳೋ ಅಂಥವರೇ ತೆಗೆದುಕೊಳ್ಳುವವರಾಗಿದ್ದಾರೆ.

(ಸ್ವಂ.

ಮಹಾಸಾನ ಳೆ
ದ್ಗುರು ಶಂಕರಾಚಾರ್ಯ
ಲ್ಲಿ ಇದೇ ತಾ|| 15 ನ
ಮಹಾಸಾನದಲ್ಲಿ ಸನಾತನ
ಮ್ಮೇಳನ ನಡೆಯಿತು,
ನಾನಾ ಭಾಗಗಳಿಂದ ಅನೇಕ
ಯರು ಸಮ್ಮೇಳನದಲ್ಲಿ ಭಾಗವಹಿ
ರು. ಪ್ರಜಾ ವರ್ಗದ ಶಾಂತಿ ಸಾ
ಮತ್ತು ಸಂತೋಷ ಇವುಗಳಿಗೆ ಮೂಲ
ಮಾರ್ಗವು ಧರ್ಮ ಮತ್ತು ಸರ್ಕಾರ
ವು ಧರ್ಮದ ವಿಷಯದಲ್ಲಿ ಪೂರ್ಣ ತಾ
ಟಸ್ಥ್ಯವನ್ನು ವಹಿಸಿರಬೇಕೆಂಬ ಠರಾವು
ಮಂಜೂರಾಯಿತು.

ಶ್ರೀ ಜಗದ್ಗುರು ಶಂಕರಾಚಾರ್ಯರವರು ಸ್ಥಾಪಿಸಲಿರುವ ನೂತನ ದ್ವಾರಕಾ ವಿಶ್ವವಿದ್ಯಾಲಯವು ಪಂಚ ಸಂಸ್ಕೃತಿಗೆ ಒಂದು ಆಸ್ತಿಭಾರವಾಗುವುದೆಂದು ಪ್ರೊ|| ದುರ್ಗಾಲರು ಹೇಳಿದರು. ಆಹಮದಾಬಾದಿನಲ್ಲಿನ ಪ್ರೇಮ-ಚಂದ್ ರಾಯಮಚಂದ್ ಟ್ರೈನಿಂಗ್ ಕಾಲೇಜ್ ಹಾಸ್ಟಲ್ಲಿನಲ್ಲಿ ಜಾತಿ ಕೋಮುಗಳ ದ ಬ್ಬಾಳಿಕೆಯನ್ನು ಜಗದ್ಗುರುಗಳು ಖಂಡಿಸಿದರು ಮತ್ತು ಕ್ಷಿಪ್ರದಲ್ಲೇ ದ್ವಾರ್ಕಾದಲ್ಲಿ ಒಂದು ಮಹಾ ಯಜ್ಞವೂ ಧರ್ಮ ಸಮ್ಮೇಳನವೂ ನಡೆಸಲ್ಪಡುವುದಾಗಿ ತಿಳಿಸಿದರು. ಶ್ರೀ ಜಗದ್ಗುರುಗಳು ಮಹಾ ಶಿವರಾತ್ರಿ ಪ್ರಯುಕ್ತ ಜಗದೀಶ್ವರಕ್ಕೆ ಈ ದಿನ ಪ್ರಯಾಣ ಬೆಳೆಸುವರು ನಂತರ ದ್ವಾರ್ಕಾಕ್ಕೆ ದಯಮಾಡಿಸುವರು. ದ್ವಾರ್ಕಾದಲ್ಲಿ ಮಹಾ ಯಜ್ಞ ಮತ್ತು ಸಮ್ಮೇಳನಗಳು ಮಾರ್ಚಿ ಎರಡನೇ ವಾರದಲ್ಲಿ ನಡೆಯುವುವು.

ಶ್ರೀ ಪಾ ದ

ಸೇವಿಸು
ಗವು ಸಂಪೂ
ವುದು. 7-3-47
ಸೇಪಿಸಬೇಕು.
ಬರೆಯಿರಿ ಅಡ್ರೆಸ್

Manager
Kalyan Karyalaya
O. Chitrakot (U. P.)

ದಿನ ಪತ್ರಿಕೆ. ತಿಂಗಳಿಗೆ ಆರಾಣೆ
ಸೋವ-ವಾರದ ಸಂಚಿಕೆ
ವಾರ್ಷಿಕಚಂದಾ
ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ 1-12-0

ಸಾ ಮಾಜಿಕ

ಅಕ

ರ ಭಾವಪರಿಪೂರ್ಣವಾದ ಕಥೆ ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವ ವರೆಗೂ ಊಟಕ್ಕೆ ಕೂಡ ಏಳಲು ಮನ ಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೆ ಜು 1 ಆಣೆ. ಮುಂಗಡ ಕಳುಹಿಸಬೇಕ್ಕ

ದೊರೆಯುವ ಸ್ಥಳ—
ಸತ್ಯವಾದಿ ಆಫೀಸ್, ಮೈಸೂರು

ಚಿತ್ರಕೂಟದ ಗೂರಲು ಬೂತಿ

ಬಹು ಶಕ್ತಿಯುತವಾದ ಮತ್ತು ಲೋಕಪ್ರಸಿದ್ಧವಾದ ಈ ಬೂತಿಯನ್ನು ಒಂದೇ ಹೊತ್ತು ತಾ॥ 7-3-47 ನೇ ಪೂರ್ಣಿಮೆ ದಿವಸ ಸೇವಿಸುವುದರಿಂದ ಗೂರಲು ಸಂಪೂರ್ಣವಾಗಿ ನಿವಾರಣೆ ಯಾಗುವುದು ಕೂಡಲೇ ಇಂಗ್ಲೀಷಿ ನಲ್ಲಿ ಬರೆಯಿರಿ.

Shree Mahatma Maunibaba
Ayurvedic Ashram
Chitrakot
Dt. Banda, (U. P.

ಸುಖ ಆರೋಗ್ಯ ಅನಂದಮಯ



ಜೀ ವಿ ತ ಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ
ಹಿಂಗಿನ ಪುಡಿ ಉಪಯೋಗಿಸಿ

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೆರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಸಾರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಸಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಘರದೂಳಿಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,
(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)
೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

॥ವಂದೇ ವಾತರಂ॥
ಶ್ರೇಷ್ಠವಾದ
ರಾಜಪುರಿ ಹೊಗೇಸೊಪ್ಪಿನಿಂದ
— ತಯಾರಿಸಲ್ಪಟ್ಟ —

ಕಾಂಗ್ರೆಸ್

(ರಿಜಿಸ್ಟರ್ಡ್)
ಮಂಗಳೂರು
ಬೀಡಿಗಳು

ಜೆ. ಎಸ್. ಟೊಬ್ಯಾಕೊ ವರ್ಕ್ಸ್
ಬಸ್ ಟರ್ಮಿನಸ್, ಮೈಸೂರು.

At Opera ☐☐ From 19-2-47

ಟಿ. ಆರ್. ರಾಮಚಂದ್ರ, ಎಂ. ಆರ್. ಬಾಲಸುಬ್ರಹ್ಮಣ್ಯಂ, ಶಕುಂತಲಾದೇವಿ
ಪ್ರೇಮಾವತಿ ಪಾತ್ರವಹಿಸಿರುವ

ವಿದ್ಯಾಪತಿ

(ತಮಿಳು ಚಿತ್ರ)

Coming Shortly at Opera

ಶಕ್ತಿಸುಧಾ

ರಕ್ತವೃದ್ಧಿಗೆ, ಧಾತುಪುಷ್ಟಿಗೆ ಸಂಜೀವನ
ನಿಸ್ಸಾರವಾದ, ನಶಿಸಿರುವ ದೇಹಕ್ಕೆ ನವಚೈತನ್ಯವನ್ನು ಕೊಡುವುದರಲ್ಲಿ
ಅದ್ವಿತೀಯವಾದುದು.
ವಿಳಾಸ — ಶಕ್ತಿಸುಧಾ, 1067 ಚಾಮರಾಜಪುರಂ, ಮೈಸೂರು

SHAKTI SUDHA

For Rich Blood, Strong Nerves & Exuberant Vitality

At Ranjit____ 4th Houseful Week

SHAHJEHAN

ಸೈಗಾಲ್, ಜೈರಾಜ್ ರಾಗಿನಿ ನಸೀಂ ಪಾತ್ರವಹಿಸಿರುವ

ಷಹಜಹಾನ್

Edited, Printed and Published by M. S Krishna R
Satyavadi Press ChamarajAgra-har, Mysore.